# ಕರ್ನಾಟಕ ಸರ್ಕಾರ

# ಅಭಿಯೋಜನ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ

## 2011- 2012ರ ಸಾಲಿನ

## ವಾರ್ಷಿಕ ವರದಿ ಹಾಗೂ ನಿರ್ವಹಣಾ ಮುಂಗಡದ ವಿವರಗಳು

ಸಂಖ್ಯೆ: ಡಿಪಿಎನ್: ಕೇಂಸ: ವಿವ: 21: 2012–2013

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರ ಕಛೇರಿ, 6ನೇ ಮಹಡಿ,
ಕಾವೇರಿ ಭವನ, ಕೆ.ಹೆಚ್.ಬಿ ಕಾಂಪ್ಲೆಕ್ಸ್,
ಬೆಂಗಳೂರು–09

ದಿನಾಂಕ: 24–07–2012

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಒಳಡಾಳಿತ ಇಲಾಖೆ,
ವಿಧಾನಸೌಧ,
ಬೆಂಗಳೂರು.

–ಇವರಿಗೆ,

ಮಾನ್ಯರೆ,

ವಿಷಯ:– 2011–2012ನೇ ಸಾಲಿನ ವಾರ್ಷಿಕ ವರದಿ ಹಾಗೂ ಕಾರ್ಯನಿರ್ವಹಣಾ ಮುಂಗಡದ ಪ್ರತಿಗಳನ್ನು ಸಲ್ಲಿಸುವ ಕುರಿತು,
ಉಲ್ಲೇಖ:– ಸರ್ಕಾರದ ಪತ್ರ ಸಂಖ್ಯೆ: ಒಇ 49 ಸಶಾಸ 2021, ದಿನಾಂಕ:19–07–2012.

---

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ 2011–2012ನೇ ಸಾಲಿನ ವಾರ್ಷಿಕ ವರದಿ ಮತ್ತು ಕಾರ್ಯನಿರ್ವಹಣಾ ಮುಂಗಡದ ವಿವರಗಳ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಸರ್ಕಾರದ ಸೂಚನೆಗಳಿಗೆ ಅನುಸಾರವಾಗಿ ಈ ಇಲಾಖೆಗೆ ಸಂಬಂಧಿಸಿದಂತೆ 2011–2012ರ ಸಾಲಿನ ವಾರ್ಷಿಕ ವರದಿ ಮತ್ತು ಕಾರ್ಯನಿರ್ವಾಹಣಾ ಮುಂಗಡದ ವಿವರಗಳ ಕನ್ನಡ ಮತ್ತು ಆಂಗ್ಲ ಭಾಷೆಯ 02 ಪ್ರತಿಗಳನ್ನು ತಯಾರಿಸಿದ್ದು, ಸದರಿ ವರದಿಯನ್ನು ಸರ್ಕಾರದ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

(ಹೆಚ್.ಆರ್. ರೇಣುಕ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು
ಬೆಂಗಳೂರು,
ದೂ:22213856.

<u>ಪ್ರತಿಯನ್ನು:–</u>

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ,(ಸಮನ್ವಯ) ಮಾಹಿತಿಗಾಗಿ ವರದಿಯ ಪ್ರತಿಯೊಂದಿಗೆ ಕಳುಹಿಸಲಾಗಿದೆ.

# ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ

1) **ಮುಖ್ಯ ಧ್ಯೇಯಗಳು ಮತ್ತು ಜವಾಬ್ದಾರಿಗಳು** :-

ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನ್ಯಾಯಾಲಯಗಳಲ್ಲಿ ನಡೆಸಲು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಇದಲ್ಲದೆ, ಸರ್ಕಾರಿ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯದ ಸಿವಿಲ್ ಜಡ್ಜ್ ನ್ಯಾಯಾಲಯಗಳು ಮತ್ತು ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ನಡೆಸಲಾಗುವ ಸಿವಿಲ್ ವ್ಯಾಜ್ಯಗಳ ಮೇಲ್ವಿಚಾರಣೆಯೂ ಕೂಡ ಈ ಇಲಾಖೆಯ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಎ 07 ಎಲ್‌ಆರ್‌ಬಿ 2004 ದಿ: 23/9/2004ರ ಪ್ರಕಾರ ಈ ಇಲಾಖೆಯನ್ನು ಒಳಾಡಳಿತ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

2) **ಮುಖ್ಯ ಕರ್ತವ್ಯಗಳು** :-

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ :-

1. ಕ್ರಿಮಿನಲ್ ನ್ಯಾಯಾಲಯಗಳು ಮತ್ತು ಸತ್ರ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ರಾಜ್ಯದ ಪರವಾಗಿ ಅಭಿಯೋಜನೆಯನ್ನು ನಡೆಸುವ ವ್ಯವಸ್ಥೆ ಮಾಡುವುದು.

2. ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಮತ್ತು ಸತ್ರನ್ಯಾಯಾಲಯಗಳು ನೀಡಿದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸುವುದು ಮತ್ತು ಅಂತಹ ತೀರ್ಪುಗಳು ಮತ್ತು ಆದೇಶಗಳ ವಿರುದ್ಧ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

3. ಅಭಿಯೋಗದಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬಂದ ಪ್ರಸ್ತಾವನೆಗಳಿಗೆ ಅಭಿಪ್ರಾಯವನ್ನು ನೀಡುವುದು.

4. ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಯುಕ್ತ ನ್ಯಾಯಾಲಯಗಳಿರುವ ತಾಲ್ಲೂಕಿನ ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಸಿವಿಲ್ ವ್ಯಾಜ್ಯಗಳನ್ನು ನಡೆಸುವುದು.

5. ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿವಿಲ್ ವ್ಯಾಜ್ಯಗಳಲ್ಲಿ ನೀಡಿದ ತೀರ್ಪು ಮತ್ತು ಆದೇಶಗಳನ್ನು

ಪರಿಶೀಲಿಸಿ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡುವುದು.

6. ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸಲ್ಲಿಸುವ ದೋಷಾರೋಪಣ ಪಟ್ಟಿಗಳನ್ನು ಪರಿಶೀಲಿಸುವುದು.

3) **ಸಂಘಟನೆ:-**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. 03 ಅಭಿಯೋಗ ಉಪ ನಿರ್ದೇಶಕರುಗಳು, 02 ಕಾನೂನು ಅಧಿಕಾರಿಗಳು (ಹಿರಿಯ),06 ಕಾನೂನು ಅಧಿಕಾರಿಗಳು (ಕಿರಿಯ), ಒಬ್ಬರು ಕೇಂದ್ರ ಸಹಾಯಕರು, 02 ಆಡಳಿತಾಧಿಕಾರಿಗಳು, 01-ಲೆಕ್ಕ ಪರಿಶೋಧನಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಅವರಿಗೆ ಸಹಾಯಕರಾಗಿರುತ್ತಾರೆ.

ಬೆಂಗಳೂರು ನಗರ, ಬೆಂಗಳೂರು ವಿಭಾಗ, ಮೈಸೂರು, ದಾವಣಗೆರೆ, ಮಂಗಳೂರು, ಬೆಳಗಾವಿ ಹಾಗೂ ಗುಲ್ಬರ್ಗಗಳಲ್ಲಿ ಒಟ್ಟು 7 ವಿಭಾಗೀಯ ಕಛೇರಿಗಳು ಇದ್ದು, ಕಾನೂನು ಅಧಿಕಾರಿ (ಹಿರಿಯ) ಇವರು ವಲಯ ಮಟ್ಟದಲ್ಲಿ, ಕಾನೂನು ಅಧಿಕಾರಿ (ಕಿರಿಯ), ಆಡಳಿತಾಧಿಕಾರಿಗಳು ಮತ್ತು ಸಿಬ್ಬಂಧಿವರ್ಗದವರ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಅಭಿಯೋಜಕರುಗಳು ಸತ್ರ ನ್ಯಾಯಾಲಯಗಳಲ್ಲಿ, ರಾಜ್ಯದಲ್ಲಿ ಸ್ಥಾಪಿತವಾಗಿರುವ 93 ತ್ವರಿತಗತಿ ನ್ಯಾಯಾಲಯಗಳ ಪೈಕಿ 48 ತ್ವರಿತಗತಿ ನ್ಯಾಯಾಲಯಗಳಲ್ಲಿ ಈ ಇಲಾಖೆಯ ವತಿಯಿಂದ 48 ಸರ್ಕಾರಿ ಅಭಿಯೋಜಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರುಗಳು, ಸಿ.ಎಂ.ಎಂ ಮತ್ತು ಸಿ.ಜೆ.ಎಂ ನ್ಯಾಯಾಲಯಗಳಲ್ಲಿ, ಸರ್ಕಾರದ ಪರವಾಗಿ ಕ್ರಿಮಿನಲ್ ಪ್ರಕರಣಗಳನ್ನು ಪ್ರತಿನಿಧಿಸುತ್ತಿರುತ್ತಾರೆ,

ಜಿಲ್ಲಾ ಕೇಂದ್ರಗಳ ಆರಕ್ಷಕ ಅಧೀಕ್ಷಕರ ಕಛೇರಿಗಳಲ್ಲಿ ತಲಾ ಒಂದು ಕಾನೂನು ಅಧಿಕಾರಿ (ಕಿರಿಯ) ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಪೋಲೀಸ್ ಆಯುಕ್ತರ ಕಛೇರಿ ಬೆಂಗಳೂರು ನಗರ, ಮೈಸೂರು ಮತ್ತು ಹುಬ್ಬಳ್ಳಿ ಇಲ್ಲಿ ಕಾನೂನು ಅಧಿಕಾರಿಗಳು (ಕಿರಿಯ) ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ತಾಲ್ಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರುಗಳು ಜೆ.ಎಂ.ಎಫ್.ಸಿ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಿರುತ್ತಾರೆ.

ಸರ್ಕಾರಿ ಅಭಿಯೋಜಕರು : ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು : ಸಹಾಯಕ ಸರ್ಕಾರಿ ಅಭಿಯೋಜಕರುಗಳಿಗೆ ಪೂರಕ ಸಿಬ್ಬಂದಿ ವ್ಯವಸ್ಥೆ ಮಾಡಲಾಗಿರುತ್ತದೆ.

4) **ವೃಂದಬಲ:-**

ದಿನಾಂಕ:31-03-2012ರಲ್ಲಿ ಇದ್ದಂತೆ ಈ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳು, ಭರ್ತಿಯಾದ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳು ಹಾಗೂ ಭರ್ತಿಯಾದ ಹುದ್ದೆಗಳಲ್ಲಿ ಎಸ್.ಸಿ ಮತ್ತು ಎಸ್.ಟಿ. ಹುದ್ದೆಗಳ ವಿವರಗಳ ಮಾಹಿತಿ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಒಟ್ಟು | ಎಸ್.ಸಿ | ಎಸ್.ಟಿ |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |
| 1. | ನಿರ್ದೇಶಕರು | 01 | 01 | – | 01 | – | – |
| 2. | ಅಭಿಯೋಗ ಉಪ ನಿರ್ದೇಶಕರು | 03 | – | 03 | 03 | – | – |
| 3. | ಸ.ಅ/ಕಾ.ಅ.(ಹಿ) | 199 | 96 | 103 | 199 | 15 | 05 |
| 4. | ಹಿ.ಸ.ಸ.ಅ/ ಕಾ.ಅ.(ಕಿ) | 117 | 79 | 38 | 117 | 16 | 02 |
| 5. | ಕೇಂದ್ರ ಸಹಾಯಕರು | 01 | 01 | – | 01 | – | – |
| 6. | ಸ.ಸ.ಅ-ವ-ಸ.ಸ.ವ | 367 | 235 | 132 | 367 | 40 | 07 |
| 7. | ಆಡಳಿತಾಧಿಕಾರಿಗಳು | 10 | 03 | 07 | 10 | 01 | – |
| 8. | ಲೆಕ್ಕಪತ್ರ ಅಧೀಕ್ಷಕರು | 01 | – | 01 | 01 | | – |
| 9. | ಲೆಕ್ಕ ಪರಿಶೋಧನಾಧಿಕಾರಿ | 01 | 01 | – | 01 | – | – |
| | ಒಟ್ಟು | 700 | 416 | 284 | 700 | 72 | 14 |
| 11 | ಅಧೀಕ್ಷಕರು | 36 | 31 | 05 | 36 | 04 | 02 |
| 12.. | ಪ್ರ.ದ.ಸ | 64 | 58 | 06 | 64 | 11 | 02 |
| 13. | ಸ.ಗ್ರಂಥಪಾಲಕರು | 01 | – | 01 | 01 | – | – |
| 14. | ಶೀಘ್ರಲಿಪಿಗಾರರು | 201 | 86 | 115 | 201 | 09 | 03 |
| 15. | ಹಿ.ಬೆರಳಚ್ಚುಗಾರರು | 37 | 30 | 07 | 37 | 01 | – |
| 16 | ದ್ವಿ.ದ.ಸ. | 65 | 44 | 21 | 65 | 07 | 03 |
| 17.. | ಬೆರಳಚ್ಚುಗಾರರು | 311 | 165 | 146 | 311 | 31 | 12 |
| 18. | ವಾಹನ ಚಾಲಕರು | 04 | 03 | 01 | 04 | 02 | 01 |
| 19 | ತೃತೀಯ ದರ್ಜೆ ಸಹಾಯಕರು | 01 | 01 | – | 01 | 01 | 00 |
| 20. | ಅಟೆಂಡರ್‌ಗಳು | 51 | 41 | 10 | 51 | 05 | 02 |
| 21. | ದಲಾಯತರು | 292 | 185 | 107 | 292 | 34 | 07 |
| | ಗ್ರೂಪ್ 'ಸಿ' ಮತ್ತು 'ಡಿ' ಒಟ್ಟು | 1063 | 644 | 419 | 1063 | 105 | 32 |
| | ಒಟ್ಟು ಹುದ್ದೆಗಳು | 1763 | 1060 | 703 | 1763 | 177 | 46 |

5) ಕ್ರಿಮಿನಲ್ ಪ್ರಕರಣಗಳ ತೀರ್ಪು ಮತ್ತು ಆದೇಶಗಳ ಪರಿಶೀಲನೆ ಬಗ್ಗೆ ವಿವರಗಳು:-

ದಿನಾಂಕ:01-04-2011 ರಿಂದ ದಿನಾಂಕ:31-03-2012ರ ಅವಧಿಯಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಹಾಗೂ ಈ ಕಛೇರಿಯಲ್ಲಿ ನ್ಯಾಯಾಲಯದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣೆಗೆ ಅರ್ಜಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಲಾದ ಕ್ರಿಮಿನಲ್ ಪ್ರಕರಣಗಳ ಅಂಕಿ ಅಂಶಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 170792 |
| 2. | ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆ ವಿಧಿಸಲಾದ ಪ್ರಕರಣಗಳ ಒಟ್ಟು ಸಂಖ್ಯೆ | 43260 |
| 3. | ಇತರೆ ರೀತಿಯಲ್ಲಿ ಅಂದರೆ ಬಿಡುಗಡೆ, ಡಿಸ್‌ಚಾರ್ಜ್‌ನಲ್ಲಿ ಅಂತಿಮಗೊಂಡ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 127532 |
| 4. | ದಿನಾಂಕ:01-04-2011 ರಿಂದ 31-03-2012ರ ಅವಧಿಯಲ್ಲಿ ಈ ಕಛೇರಿಯಲ್ಲಿ ಪರಿಶೀಲಿಸಲಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 24776 |
| 5. | ನ್ಯಾಯಾಲಯಗಳ ತೀರ್ಪು ಮತ್ತು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 401 |
| 6. | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಈ ಕಛೇರಿಯಿಂದ ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 35 |
| 7. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 24340 |

6) ಸರ್ಕಾರಿ ವ್ಯಾಜ್ಯಗಳು (ಸಿವಿಲ್):-

ದಿನಾಂಕ:01-04-2011ರಿಂದ 31-03-2012ರ ಅವಧಿಯಲ್ಲಿ ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ನ್ಯಾಯಾಲಯಗಳು ಮತ್ತು ಸಂಯುಕ್ತ ನ್ಯಾಯಾಲಯಗಳು ಹೊರಡಿಸಿರುವ ಸಿವಿಲ್ ಮೊಕದ್ದಮೆಗಳ ತೀರ್ಪುಗಳು ಮತ್ತು ಆದೇಶಗಳನ್ನು ಈ ಕಛೇರಿಯಲ್ಲಿ ಪರಿಶೀಲಿಸಿದ್ದು, ಪರಿಶೀಲಿಸಿದ ಬಗ್ಗೆ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ದಿನಾಂಕ:01-04-2011 ರಿಂದ 31-03-2012ರ ಅವಧಿಯಲ್ಲಿ ಪರಿಶೀಲಿಸಲಾದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 2503 |
| 2. | ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿರುವ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 43 |
| 3. | ಪರಿಷ್ಕರಣೆಗೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 00 |
| 4. | ಮೇಲ್ಮನಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 2460 |
| 5. | ಮೇಲ್ಕಂಡ ಅವಧಿಯಲ್ಲಿ ಸರ್ಕಾರದ ಪರವಾಗಿ ಇತ್ಯರ್ಥಗೊಂಡ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ( ವಜಾ ಆದ ದಾವೆಗಳು) | 801 |

7) **ಆಡಳಿತ:-**

ವರದಿಯ ವರ್ಷದಲ್ಲಿ ಸಮೂಹ 'ಎ' ವೃಂದದಿಂದ -13 ಹಾಗೂ ಸಮೂಹ 'ಬಿ' ವೃಂದದಿಂದ 23 ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿರುತ್ತದೆ. ಹಾಗೂ ಅಧೀಕ್ಷಕರು-01, ಪ್ರ.ದ.ಸ -01, ಶೀಘ್ರಲಿಪಿಗಾರರು-04, ದ್ವಿ.ದ.ಸ- 03. ಬೆರಳಚ್ಚುಗಾರರು-02, ಅಟೆಂಡರ್-02, ಮತ್ತು ದಲಾಯತ್ ವೃಂದದಿಂದ -08, ಜನರನ್ನು ವರ್ಗಾವಣೆ ಮಾಡಲಾಗಿರುತ್ತದೆ.

ವರದಿಯ ವರ್ಷದಲ್ಲಿ 'ಎ' ವೃಂದದಿಂದ -53 ಸರ್ಕಾರಿ ಅಭಿಯೋಜಕರ ಹುದ್ದೆಗಳಿಗೆ, 'ಬಿ' ವೃಂದದಿಂದ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ -76, ದ್ವಿ.ದ.ಸ. ವೃಂದದಿಂದ ಪ್ರ.ದ.ಸ. ವೃಂದಕ್ಕೆ-06, ಬೆರಳಚ್ಚುಗಾರರ ವೃಂದದಿಂದ ಹಿರಿಯ ಬೆರಳಚ್ಚುಗಾರರ ವೃಂದಕ್ಕೆ-06, ಹಾಗೂ ದಲಾಯತ ವೃಂದದಿಂದ ಅಟೆಂಡರ್ ವೃಂದಕ್ಕೆ -14 ಹುದ್ದೆಗೆ ಬಡ್ತಿ ನೀಡಲಾಗಿದೆ.

ವರದಿಯ ವರ್ಷದಲ್ಲಿ ಸರ್ಕಾರಿ ಅಭಿಯೋಜಕರ ಹುದ್ದೆ,-63, ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರು- 62, ಪ್ರ.ದ.ಸ.-02, ಶೀಘ್ರಲಿಪಿಗಾರರು -05, ದ್ವಿ.ದ.ಸ.-01, ಬೆರಳಚ್ಚುಗಾರರು-66, ಅಟೆಂಡರ್ -02, ಹಾಗೂ ದಲಾಯತ್ -07 ಹುದ್ದೆಗಳು ಸೃಷ್ಟಿಯಾಗಿರುತ್ತವೆ.

ವರದಿಯ ವರ್ಷದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಒಇ486 ಪಿಪಿಇ 2011, ದಿ:10-01-2012ರ ಪ್ರಕಾರ ಸಹಾಯಕ ಸರ್ಕಾರಿ ಅಬಿಯೋಜಕರು ವ ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳ ನೇಮಕಾತಿಗೆ ಆಯ್ಕೆ ಸಮಿತಿಯನ್ನು ಪುನರ್‌ರಚಿಸಿದ್ದು, 197 ಹುದ್ದೆಗಳಿಗೆ ನೇಮಕಾತಿ ಮಾಡಲು ದಿ:16-05-2012ರ ಅಧಿಸೂಚನೆ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸರ್ಕಾರದ ಪತ್ರ ಸಂಖ್ಯೆ: ಒಇ:235:ಪಿಪಿಇ:2007, ದಿ:23-10-07ರ ಪ್ರಕಾರ 35 ಬೆರಳಚ್ಚುಗಾರರನ್ನು ಮತ್ತು 51 ದಲಾಯತರನ್ನು ಹಾಗೂ ಸರ್ಕಾರದ ಪತ್ರ ಸಂಖ್ಯೆ:ಒಇ:421:ಪಿಪಿಇ:2006, ದಿ:28-08-2008 ರ ಪ್ರಕಾರ 42 ಶೀಘ್ರಲಿಪಿಗಾರರನ್ನು ಮತ್ತು 22 ಬೆರಳಚ್ಚುಗಾರರನ್ನು ಬಾಹ್ಯ ಮೂಲಗಳಿಂದ ಪಡೆದುಕೊಳ್ಳಲು ಅನುಮತಿಯನ್ನು ನೀಡಲಾಗಿರುತ್ತದೆ. ಸದರಿ ಆದೇಶದ ಪ್ರಕಾರ ಜನವರಿ-2009 ರಿಂದ ಬಾಹ್ಯ ಅಭ್ಯರ್ಥಿಗಳ ಸೇವೆಯನ್ನು ಪಡೆಯಲಾಗಿದೆ. ವರದಿಯ ವರ್ಷದಲ್ಲಿ 61 ಬೆರಳಚ್ಚುಗಾರರು, 62 ದಲಾಯತ್ ಹುದ್ದೆಗಳನ್ನು ಬಾಹ್ಯ ಮೂಲದಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ. ಸುಮಾರು 232 ಬಾಹ್ಯ ಮೂಲದ ಅಭ್ಯರ್ಥಿಗಳು ಸೇವೆ ಸಲ್ಲಿಸುತ್ತಿರುತ್ತಾರೆ.

8) 2011-12ನೇ ಸಾಲಿನಲ್ಲಿ ಪ್ರಗತಿಯ ವರದಿ:-

2011-12ರ ಸಾಲಿನಲ್ಲಿ ಕಛೇರಿಯ ಆಧುನೀಕರಣ ಯೋಜನೆ ಅಡಿಯಲ್ಲಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. 051-ಸಾಮಾನ್ಯ ವೆಚ್ಚಗಳು ಲೆಕ್ಕ ಶೀರ್ಷಿಕೆಯಲ್ಲಿ ನೀಡಿದ ಅನುದಾನದಿಂದ 05 ಗಣಕಯಂತ್ರಗಳನ್ನು ಮತ್ತು 05 ಪ್ರಿಂಟರ್ ಗಳನ್ನು ಖರೀದಿಸಲಾಗಿದೆ.

13ನೇ ಆರ್ಥಿಕ ಆಯೋಗದಡಿಯಲ್ಲಿ ಸರ್ಕಾರವು ಅಭಿಯೋಜಕರಿಗೆ ತರಬೇತಿ ನೀಡುವ ನಿಟ್ಟಿನಲ್ಲಿ, ಇಲಾಖೆಯು ಸಲ್ಲಿಸಿದ್ದ ಕಾರ್ಯ ಯೋಜನೆಯನ್ನು ಅಂಗೀಕರಿಸಿ, 05 ವರ್ಷಗಳ ಯೋಜನೆಗೆ ₹ 8.20 ಕೋಟಿ ನೀಡಲು ಒಪ್ಪಿರುತ್ತದೆ. (ಸರ್ಕಾರದ ಆದೇಶ ಸಂಖ್ಯೆ ಲಾ 231 ಎಲ್ಎಸಿ 2010, ದಿನಾಂಕ 28.01.2011) ಹಾಗೂ 2010-11ರ ಸಾಲಿಗೆ ₹ 122 ಲಕ್ಷ ಹಣ ಬಿಡುಗಡೆ ಮಾಡಿದ್ದು, ಅದನ್ನು ಸರ್ಕಾರದ ಆದೇಶದ ಪ್ರಕಾರ ಬ್ಯಾಂಕಿನಲ್ಲಿ ಖಾತೆ ತೆರೆದು, ಅದರಲ್ಲಿ ಜಮಾವಣೆ ಮಾಡಿದೆ ಹಾಗೂ ಹಂತ ಹಂತವಾಗಿ ವ್ಯಯಿಸಲಾಗುತ್ತಿದೆ. 2011-2012ನೇ ಸಾಲಿನಲ್ಲಿ 93 ಅಭಿಯೋಜಕರಿಗೆ 45 ದಿನಗಳ ಅವಧಿಯ ತರಬೇತಿಯನ್ನು ಕರ್ನಾಟಕ ಜುಡಿಷಿಯಲ್ ಅಕಾಡಮಿಯಲ್ಲಿ ನೀಡಲಾಗಿದೆ. 6 ಕಾರ್ಯಾಗಾರಗಳನ್ನು ರಾಜ್ಯ ವಿವಿಧ ಸ್ಥಳಗಳಲ್ಲಿ ಆಯೋಜಿಸಿ 300ಕ್ಕೂ ಹೆಚ್ಚು ಅಭಿಯೋಜಕರು ಕಾರ್ಯಾಗಾರದ ಲಾಭವನ್ನು ಪಡೆದುಕೊಂಡಿದ್ದಾರೆ. 2011-2012ರ ಸಾಲಿನಲ್ಲಿ ರೂ. 1,14,00,000/- ವೆಚ್ಚ ಮಾಡಲಾಗಿದೆ.

9) ಆಯವ್ಯಯ:-

ಈ ಇಲಾಖೆಯ ಅಧಿಕಾರಿಗಳ, ಸಿಬ್ಬಂದಿವರ್ಗದವರ ವೇತನ ಮತ್ತು ಭತ್ಯೆ ಹಾಗೂ ಕಛೇರಿ ನಿರ್ವಹಣಾ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಿಂದ ಭರಿಸಲಾಗುತ್ತಿದೆ.

**ಯೋಜನೇತರ**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014-114-0-02 | 2011-12ನೇ ಸಾಲಿನ ಆಯವ್ಯದಲ್ಲಿ ಮಾಡಿರುವ ಅವಕಾಶ | 2011-12ರ ಸಾಲಿನಲ್ಲಿ ವೆಚ್ಚ ಮಾಡಿದ ಮೊತ್ತ |
|---|---|---|---|
| 01 | 02 | 03 | 04 |
| 1. | 002- ಅಧಿಕಾರಿಗಳ ವೇತನ | 10,75,31,000-00 | 8,42,83,714-00 |
| 2. | 003- ಸಿಬ್ಬಂದಿ ವೇತನ | 9,28,94000-00 | 8,47,73,250-00 |
| 3. | 004 ವೃಧ್ಯಂತರ ಪರಿಹಾರ | 00-00 | 76,59,888-00 |
| 4, | 011- ತುಟ್ಟಿಭತ್ಯೆ | 14,02,97,000-00 | 11,27,85,226-00 |
| 5. | 014- ಇತರೇ ಭತ್ಯೆ | 3,57,72,000-00 | 3,79,29,319-00 |
| 6. | 015- ಪೂರಕ ವೆಚ್ಚಗಳು | 4,07,000-00 | 0000 |
| 7 | 020- ವೈದ್ಯಕೀಯ ಭತ್ಯೆ | 4,08,000-00 | 4,72,807-00 |

| | | | |
|---|---|---|---|
| 8 | 021– ವೈದ್ಯಕೀಯ ವೆಚ್ಚ ಮರು ಪಾವತಿ | 21,00,000–00 | 27,66,217–00 |
| 9. | 041– ಪ್ರಯಾಣ ವೆಚ್ಚಗಳು | 17,57,000–00 | 17,35,278–00 |
| 10 | 051– ಸಾಮಾನ್ಯ ವೆಚ್ಚಗಳು | 1,35,00,000–00 | 1,27,28,090–00 |
| 11. | 052– ದೂರವಾಣಿ ವೆಚ್ಚಗಳು | 7,96,000–00 | 3,90,573–00 |
| 12. | 059– ಇತರ ಖರ್ಚು | 79,60,000–00 | 77,58,493–00 |
| 13. | 071– ಕಟ್ಟಡ ವೆಚ್ಚಗಳು | 1,32,27,000–00 | 35,89,375–00 |
| 14. | 101– ಸಹಾಯ ಅನುದಾನ | 5,41,000–00 | 5,41,000–00 |
| 15. | 180– ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು | 1000–00 | – |
| 16. | 195– ಸಾರಿಗೆ ವೆಚ್ಚಗಳು | 7,86,000–00 | 5,94,363–00 |
| | ಒಟ್ಟು | 41,79,77,000–00 | 35,80,07,593–00 |

ಸ್ಥಳ:ಬೆಂಗಳೂರು
ದಿನಾಂಕ:24–07–2012

(ಹೆಚ್.ಆರ್ ರೇಣುಕ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು.
ಬೆಂಗಳೂರು,
ದೂರವಾಣಿ: 22213856.

ಸಂಖ್ಯೆ: ಡಿಪಿಎನ್: ಕೇಂಸ: ವಿವ: 21: 2012-2013

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರ ಕಛೇರಿ, 6ನೇ ಮಹಡಿ,
ಕಾವೇರಿ ಭವನ, ಕೆ.ಹೆಚ್.ಬಿ ಕಾಂಪ್ಲೆಕ್ಸ್,
ಬೆಂಗಳೂರು-09

ದಿನಾಂಕ: 27-07-2012

ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಒಳಡಾಳಿತ ಇಲಾಖೆ (ಸಮನ್ವಯ),
ವಿಧಾನಸೌಧ,
ಬೆಂಗಳೂರು.

-ಇವರಿಗೆ,

ಮಾನ್ಯರೆ,

ವಿಷಯ:- 2012-2013ನೇ ಸಾಲಿನ ನಿರ್ವಹಣ ಮುಂಗಡ ಪತ್ರವನ್ನು ಸಲ್ಲಿಸುವ ಕುರಿತು,

ಉಲ್ಲೇಖ:- ಅರೆ ಸರ್ಕಾರದ ಪತ್ರ ಸಂಖ್ಯೆ: ಒಇ 49 ಸಶಾಸ 2012, ದಿನಾಂಕ:- 24-07-2012.

----

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ 2012-2013ನೇ ಸಾಲಿನ ನಿರ್ವಹಣಾ ಮುಂಗಡದ ವಿವರಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಯೋಜನೇತರ ಶಿರ್ಷಿಕೆಯಡಿಯಲ್ಲಿ ಬರುತ್ತಿದ್ದು, ಯಾವುದೇ ವಿಶೇಷವಾದ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುವುದಿಲ್ಲ. ಅದಾಗ್ಯು ಸರ್ಕಾರವು ಇಲಾಖೆಯ ನಿರ್ವಹಣೆಗಾಗಿ 2012-2013ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅಯಾವ್ಯಯ ಅನುದಾನಗಳನ್ನು ಕಟ್ಟುನಿಟ್ಟಾಗಿ ವೆಚ್ಚಮಾಡಲಾಗುವುದು ಎಂಬ ವರದಿಯನ್ನು ಸರ್ಕಾರದ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

(ಹೆಚ್.ಆರ್ ರೇಣುಕ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು
ಬೆಂಗಳೂರು, 27/7/12
ದೂ:22213856.

ಯೋಜನೇತರ

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014-114-0-02 | 2012-2013ನೇ ಸಾಲಿಗೆ ಸರ್ಕಾರವು ಮಂಜೂರು ಮಾಡಿರುವ ಅನುದಾನದ ವಿವರಗಳು (ಲಕ್ಷಗಳಲ್ಲಿ) |
|---|---|---|
| 01 | 02 | 03 |
| 1 | 002- ಅಧಿಕಾರಿಗಳ ವೇತನ | 1071.09 |
| 2 | 003- ಸಿಬ್ಬಂದಿ ವೇತನ | 923.70 |
| 3 | 004 ವೃದ್ಧ್ಯಂತರ ಪರಿಹಾರ | 299.21 |
| 4 | 011- ತುಟ್ಟಿಭತ್ಯೆ | 1675.62 |
| 5 | 014- ಇತರೇ ಭತ್ಯೆ | 788.22 |
| 6 | 015- ಪೂರಕ ವೆಚ್ಚಗಳು | ---- |
| 7 | 020- ವೈದ್ಯಕೀಯ ಭತ್ಯೆ | 3.94 |
| 8 | 021- ವೈದ್ಯಕೀಯ ವೆಚ್ಚ ಮರು ಪಾವತಿ | 60.82 |
| 9 | 041- ಪ್ರಯಾಣ ವೆಚ್ಚಗಳು | 15.00 |
| 10 | 051- ಸಾಮಾನ್ಯ ವೆಚ್ಚಗಳು | 150.00 |
| 11 | 052- ದೂರವಾಣಿ ವೆಚ್ಚಗಳು | 7.96 |
| 12 | 059- ಇತರ ಖರ್ಚು | 100.00 |
| 13 | 071- ಕಟ್ಟಡ ವೆಚ್ಚಗಳು | 141.82 |
| 14 | 101-- ಸಹಾಯ ಅನುದಾನ | 5.63 |
| 15 | 180- ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು | 0.01 |
| 16 | 195- ಸಾರಿಗೆ ವೆಚ್ಚಗಳು | 8.82 |
| 17 | ಕಛೇರಿಯ ಪೀಠೋಪಕರಣಗಳು ಮತ್ತುಜೋಡಣೆಗಳ ಖರೀದಿ | 2.00 |
| | ಒಟ್ಟು | 5253.84 |

ಸ್ಥಳ:ಬೆಂಗಳೂರು
ದಿನಾಂಕ: 27-07-2012

(ಹೆಚ್.ಆರ್ ರೇಣುಕ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು.
ಬೆಂಗಳೂರು,
ದೂರವಾಣಿ: 22213856.
27/7/12

## ಯೋಜನೇತರ

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014-114-0-02 | 2012-2013ನೇ ಸಾಲಿಗೆ ಸರ್ಕಾರವು ಮಂಜೂರು ಮಾಡಿರುವ ಅನುದಾನದ ವಿವರಗಳು (ಲಕ್ಷಗಳಲ್ಲಿ) |
|---|---|---|
| 01 | 02 | 03 |
| 1 | 002- ಅಧಿಕಾರಿಗಳ ವೇತನ | 1071.09 |
| 2 | 003- ಸಿಬ್ಬಂದಿ ವೇತನ | 923.70 |
| 3 | 004 ವೃದ್ಧ್ಯಂತರ ಪರಿಹಾರ | 299.21 |
| 4 | 011- ತುಟ್ಟಿಭತ್ಯೆ | 1675.62 |
| 5 | 014- ಇತರೇ ಭತ್ಯೆ | 788.22 |
| 6 | 015- ಪೂರಕ ವೆಚ್ಚಗಳು | ---- |
| 7 | 020- ವೈದ್ಯಕೀಯ ಭತ್ಯೆ | 3.94 |
| 8 | 021- ವೈದ್ಯಕೀಯ ವೆಚ್ಚ ಮರು ಪಾವತಿ | 60.82 |
| 9 | 041- ಪ್ರಯಾಣ ವೆಚ್ಚಗಳು | 15.00 |
| 10 | 051- ಸಾಮಾನ್ಯ ವೆಚ್ಚಗಳು | 150.00 |
| 11 | 052- ದೂರವಾಣಿ ವೆಚ್ಚಗಳು | 7.96 |
| 12 | 059- ಇತರ ಖರ್ಚು | 100.00 |
| 13 | 071- ಕಟ್ಟಡ ವೆಚ್ಚಗಳು | 141.82 |
| 14 | 101-- ಸಹಾಯ ಅನುದಾನ | 5.63 |
| 15 | 180- ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು | 0.01 |
| 16 | 195- ಸಾರಿಗೆ ವೆಚ್ಚಗಳು | 8.82 |
| 17 | ಕಛೇರಿಯ ಪೀಠೋಪಕರಣಗಳು ಮತ್ತುಜೋಡಣೆಗಳ ಖರೀದಿ | 2.00 |
| | ಒಟ್ಟು | 5253.84 |

ಸ್ಥಳ:ಬೆಂಗಳೂರು
ದಿನಾಂಕ: 27-07-2012

(ಹೆಚ್.ಆರ್ ರೇಣುಕ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು.
ಬೆಂಗಳೂರು,
ದೂರವಾಣಿ: 22213856.

27/7/12